**Spl.C.78/2019**
**P.W.-01**
**C.W.-01**

ದಿನಾಂಕಃ18-01-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ -

13. ತನಿಖಾಧಿಕಾರಿಯು ಆರೋಪಿಯನ್ನು ಲಂಚದ ಹಣ ಎಲ್ಲಿ ಎಂದು ಕೇಳಿದಾಗ, ಆರೋಪಿಯು ತನ್ನ ಪ್ಯಾಂಟಿನ ಎಡ ಭಾಗದ ಜೇಬಿನಿಂದ ಲಂಚದ ಹಣದ ನೋಟುಗಳನ್ನು ಹಾಜರು ಪಡಿಸಿದನು ಎಂದರೆ ಸರಿ. ಸದರಿ ನೋಟುಗಳ ವಿವರಗಳನ್ನು ಪಂಚಸಾಕ್ಷಿ-1 ರವರ ಬಳಿ ಇದ್ದ ನೋಟಿನ ವಿವರಗಳುಳ್ಳ ಹಾಳೆಯಲ್ಲಿ ಇದ್ದ ವಿವರಗಳೊಂದಿಗೆ ತಾಳೆ ಮಾಡಿ ನೋಡಲು ತನಿಖಾಧಿಕಾರಿಯು ಸೂಚಿಸಿದ್ದಾರೆ ಎಂದರೆ ಸರಿ ಮತ್ತು ತಾಳೆ ಮಾಡಿ ನೋಡಿದಾಗ ಸದರಿ ವಿವರಗಳು ಒಂದಕ್ಕೊಂದು ತಾಳೆ ಹೊಂದಿದ್ದವು ಎಂದರೆ ಸರಿ. ಸದರಿ ನೋಟುಗಳನ್ನು ತನಿಖಾಧಿಕಾರಿಯು ವಶ ಪಡಿಸಿಕೊಂಡಿದ್ದಾರೆ ಎಂದರೆ ಸರಿ. ಆರೋಪಿಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿ ಸದರಿ ಪ್ಯಾಂಟಿನ ಕಿಸೆಯನ್ನು ಸೋಡಿಯಂ ದ್ರಾವಣದಲ್ಲಿ ಅದ್ದಿಸಿ ತೊಳೆದು ಸದರಿ ಪ್ಯಾಂಟನ್ನು ಸೀಲು ಮಾಡಲಾಯಿತು. ಹಾಗೂ ದ್ರಾವಣವನ್ನು ಸಹ ಗಾಜಿನ ಬಾಟಲಿಗೆ ಹಾಕಿ ಅಮಾನತುಪಡಿಸಿಕೊಳ್ಳಲಾಯಿತು ಎಂದರೆ ಸರಿ. ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ಬದಲಾಗಿತ್ತು ಎಂದರೆ ಸರಿ. ವಾಯ್ಸ್ ರೆಕಾರ್ಡರ್‌ನಲ್ಲಿ ಇದ್ದ ಸಂಭಾಷಣೆಯನ್ನು ಚಲಾಯಿಸಿ ಕೇಳಲಾಗಿ ಅದರಲ್ಲಿದ್ದ ಧ್ವನಿ ಆರೋಪಿಯ ಧ್ವನಿಯನ್ನು ರಮೇಶ್ ಬಾಬು ತಹಶೀಲ್ದಾರರು ಗುರುತಿಸಿರುತ್ತಾರೆ ಎಂದರೆ ಸರಿ. ನಂತರ ನನ್ನ ಮತ್ತು ಆರೋಪಿಯ ಮಾದರಿ ಧ್ವನಿಯನ್ನು ಪರೀಕ್ಷೆಗೆ ಕಳುಹಿಸುವ ಸಲುವಾಗಿ ರೆಕಾರ್ಡ್ ಮಾಡಲಾಯಿತು ಎಂದರೆ ಸರಿ.
ಪಾಟೀ ಸವಾಲನ್ನು ಆರೋಪಿಯ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಗಿದೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.

-